ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.

ಸಿಸಿ ನಂ **33/2025**

ಸಿ ಡಬ್ಲ್ಯೂ ಃ-**15**
ಪಿ ಡಬ್ಲ್ಯೂ ಃ-**9**

ಸಾಕ್ಷಿದಾರರ ಹೆಸರು ಃ ಶಶಿಧರ
ತಂದೆಯ ಹೆಸರು ಃ ಮಂಜುನಾಥ
ವಯಸ್ಸು ಃ **40** ವರ್ಷ
ಉದ್ಯೋಗ ಃ ವ್ಯಾಪಾರ
ವಾಸಸ್ಥಳ ಃ ಹೊನ್ನಾಳ್ಳಿ

ದಿನಾಂಕಃ **27-04-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನಾನು ಟಿ.ವಿ.ಎಸ್ ಅಪಾಚಿ ಬೈಕ್ ಅನ್ನು ಖರೀಧಿಸಿದ್ದು, ಅದರ ನೊಂದಣಿ ಸಂಖ್ಯೆಃ ಕೆ.ಎ 17 EV 7043 ಆಗಿದ್ದು, ದಿಃ 15.01.2021 ರಂದು ನಾನು ಅಂಗಡಿಯಿಂದ ಮನೆಗೆ ಮದ್ಯಾಹ್ನ ಊಟಕ್ಕೆ ಬಂದಾಗ ಮದ್ಯಾಹ್ನ 1.00 ಗಂಟೆಯ ಸುಮಾರಿಗೆ ನಮ್ಮ ಮನೆಯ ಮುಂದೆ ಬೈಕ್ ಅನ್ನು ನಿಲ್ಲಿಸಿ ಮನೆಯ ಒಳಗೆ ಹೋಗಿ ಊಟ ಮಾಡಿ ಪುನಃ 2.30 ರಿಂದ 3.00 ಗಂಟೆ ಅವಧಿಯಲ್ಲಿ ವಾಪಸ್ಸು ಬಂದು ನೋಡಿದಾಗ ನನ್ನ ಬೈಕು ಇರಲಿಲ್ಲ. ನಾನು ಸದರಿ ಬೈಕು ಸಿಗಬಹುದು ಎಂದು ಹುಡುಕಾಡಿ ಬೈಕ್ ಸಿಗದಿದ್ದಾಗ ದಿನಾಂಕಃ 27.11.2021 ರಂದು ಹೊನ್ನಾಳ್ಳಿ ಪೋಲಿಸ್ ಠಾಣೆಗೆ ನನ್ನ ಬೈಕು ಕಳ್ಳತನ ಆದ ಬಗ್ಗೆ ದೂರನ್ನು ಕೊಟ್ಟಿದ್ದು ಸದರಿ ಬೈಕು ಪತ್ತೆ ಆಗಿರಲಿಲ್ಲ. ದಿನಾಂಕಃ 02.01.2023 ರಂದು ಹೊನ್ನಾಳ್ಳಿ ಪೋಲಿಸ್ ನವರು ನನಗೆ ಪೋನ್ ಮಾಡಿ ನಿಮ್ಮ ಬೈಕು ಎನ್ ಆರ್ ಪುರ ಪೋಲಿಸ್ ಠಾಣೆಯಲ್ಲಿ ಸಿಕ್ಕಿರುವ ಬಗ್ಗೆ ಮಾಹಿತಿ ಬಂದಿದ್ದು, ನನ್ನನ್ನು ಹೋಗಿ ನೋಡಿಕೊಂಡು ಬರುವಂತೆ ಹೇಳಿದ್ದು, ನಾನು ದಿನಾಂಕ 03.01.2023 ರಂದು ಎನ್.ಆರ್.ಪುರ ಪೋಲಿಸ್ ಠಾಣೆಗೆ ಬಂದು ಬೈಕ್ ನೋಡಲಾಗಿ ಸದರಿ ಬೈಕ್ ನಂಬರ್ ಪ್ಲೇಟ್ ಅನ್ನು ಬದಲಾವಣೆ ಮಾಡಿದ್ದು ನಂತರ ನನ್ನ ಬಳಿ ಇದ್ದ ಆರ್ ಸಿ ಕಾರ್ಡ ನಿಂದ ಇಂಜಿನ್ ನಂಬರ್ ಮತ್ತು ಚಾಸಿ ನಂಬರ್ ಅನ್ನು ಪರೀಕ್ಷಿಸಲಾಗಿ ಸದರಿ ಬೈಕ್ ನನಗೆ ಸಂಬಂಧಿಸಿದ್ದು ಇರುತ್ತದೆ. ನಾನು ಎನ್ ಆರ್ ಪುರ ಪೋಲಿಸ್ ಠಾಣೆಗೆ ಹೋಗಿ ನೋಡಲಾಗಿ ಸದರಿ ಬೈಕ್‌ನ ಪ್ಲೇಟ್ ನಲ್ಲಿ ಕೆ.ಎ. 14 ಎಂದು ನಮೂದು ಆಗಿತ್ತು. ಸದರಿ ಬೈಕ್ ಅನ್ನು ಅಪಘಾತ ಪಡಿಸಿ ಬಿಟ್ಟುಹೋಗಿರುತ್ತಾರೆ ಎಂದು ಪೋಲಿಸರು ತಿಳಿಸಿದ್ದು ನಂತರ ನಮ್ಮ ವಕೀಲರು ಎಂ.ವಿ.ಸಿ. ಕೇಸ ನಲ್ಲಿ ಸದರಿ ಬೈಕ್ ಅನ್ನು ಅಬ್ದಾನ್ ನಾಸಿರ್ ಈತನು ಅಪಘಾತ ಪಡಿಸಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ನಾನು ಪೋಲಿಸ್ ನವರಿಗೆ ಹೊನ್ನಾಳ್ಳಿ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟ ಬಗ್ಗೆ ನಾನು ದಾಖಲೆಯನ್ನು

ಕೊಟ್ಟಿರುತ್ತೇನೆ. ಆ ಬಗ್ಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ. (ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

::: ಪಾಟೀ ಸವಾಲು ಸಹಾಯಕ ಸರ್ಕಾರಿ ವಕೀಲರಿಂದ :::

1. ನಾನು ಎನ್ ಆರ್ ಪುರ ಪೋಲಿಸ್ ಠಾಣೆಗೆ ಬಂದಾಗ ನನ್ನ ಬೈಕ ಅನ್ನು ಕದ್ದ ಕಳ್ಳರು ಯಾರೋ ಬೈಕ್ ನ ನಂಬರ್ ಪ್ಲೇಟ್ ಬದಲಾವಣೆ ಮಾಡಿ ಅದಕ್ಕೆ ಕೆ.ಎ 14 ಇಎನ್ 1422 ಎಂದು ನಂಬರ್ ಪ್ಲೇಟ್ ಹಾಕಿ ಸದರಿ ಶಿವಮೊಗ್ಗದ ವಾಸಿ ಸಾಹಿಲ್ ಮತ್ತು ಆಶು ಎಂಬುವವರು ಸಿರಾಜುದ್ದಿನ್ ಅಲಿಯಾಸ್ ಜಾಫರ್ ಎಂಬುವವರ ಮೂಲಕ ಎನ್ ಆರ್ ಪುರದ ಚಂದನ್ ಇವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ದಿನಾಂಕಃ 24.06.2022 ರಂದು ಕಾನುನು ಸಂಘರ್ಷಕ್ಕೆ ಒಳಗಾದ ಅಬ್ದಾನ್ ಅನ್ನು ಚಂದನ್ ಅವರಿಂದ ಪಡೆದುಕೊಂಡು ಎನ್ ಆರ್ ಪುರದ ಅಗ್ರಹಾರದ ಬಳಿ ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ ಉಮೇಶ ಎಂಬುವವರಿಗೆ ಡಿಕ್ಕಿ ಪಡೆಸಿ ಸದರಿಯವರು ಮೃತ ಪಟ್ಟಿರುತ್ತಾರೆ ಎಂಬ ವಿಚಾರವನ್ನು ಪೋಲಿಸರು ನನಗೆ ತಿಳಿಸಿದ್ದರು ಎಂದರೆ ಸಾಕ್ಷಿ ಅಪಘಾತ ಆದ ಬಗ್ಗೆ ತಿಳಿಸಿದ್ದರು ಆದರೆ ಇಂತವರಿಂದ ಇಂತವರಿಗೆ ಅಪಘಾತ ಆಗಿದೆ ಎಂದು ತಿಳಿಸಿಲ್ಲ ಎಂದು ಉತ್ತರಿಸಿರುತ್ತಾರೆ.

೦೫ ಪಾಟೀ ಸವಾಲು **1** ನೇ ಆರೋಪಿ ಶ್ರೀ **NVS** ವಕೀಲರಿಂದ ೦೫

1. ಬೈಕ್ ಕಳ್ಳತನ ಆದ ನಂತರ ನಾನು ದೂರು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಪೋಲಿಸರು ಹುಡುಕಲು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ನನಗೆ ಬೈಕ್ ಅನ್ನು ಯಾರು ಕಳ್ಳತನ ಮಾಡಿರುತ್ತಾರೆ ಮತ್ತು ತೆಗೆದುಕೊಂಡು ಹೋಗಿರುತ್ತಾರೆ ಎಂಬ ಬಗ್ಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನಗೆ ಬೈಕ್ ಕಳ್ಳತನವನ್ನು ಮಾಡಿರುವ ವಿಚಾರ MVC ಪ್ರಕರಣದಲ್ಲಿ ನನಗೆ ಗೊತ್ತಾಗಿರುತ್ತದೆ. MVC ಪ್ರಕರಣದಲ್ಲಿ ನನಗೆ ಬೈಕ್ ಕಳ್ಳತನ ಆದ ವಿಚಾರದ ಬಗ್ಗೆ ಗೊತ್ತಾಗಿದ್ದು ಅದಕ್ಕಿಂತ ಪೂರ್ವದಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 02.01.2023 ರಂದು ಹೊನ್ನಳ್ಳಿ ಪೋಲಿಸ್ ಠಾಣೆಗೆ ಕರೆ ಬಂದಿದ್ದು ನಾನು ದಿನಾಂಕಃ 03.01.2023 ಕ್ಕೆ ಎನ್ ಆರ್ ಪುರ ಪೋಲಿಸ್ ಠಾಣೆಗೆ ಬಂದಿರುತ್ತೇನೆ. ನನ್ನ ಬೈಕು ಕಳ್ಳತನ ಆಗಿರುತ್ತದೆ ಹಾಗೂ ಆ ಸಂಬಂಧ ನಾನು ದೂರು ಕೊಟ್ಟಿರುತ್ತೇನೆ ನಂತರ ಎನ್ ಆರ್ ಪುರ ಪೋಲಿಸ್ ಠಾಣೆ ಯವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ 2 ಮತ್ತು 3 ರ ಪರ ವಕೀಲರು ಆರೋಪಿ 1 ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ